ಆ) ಕಾರ್ಮಿಕ ನ್ಯಾಯಾಲಯಗಳಲ್ಲಿ ಹೆಚ್ಚಿನ ಕೆಲಸದ ಒತ್ತಡದಿಂದ ಮೊಕದ್ದಮೆಗಳು ಇತ್ಯರ್ಥವಾಗದೆ ಬಾಕಿ ಉಳಿದಿರುತ್ತವೆ.

ಇ) ಮೊಕದ್ದಮೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕಾರ್ಮಿಕ ನ್ಯಾಯಾಲಯಗಳಿಗೆ ನಿರ್ದೇಶನ ನೀಡುವಂತೆ ಕರ್ನಾಟಕ ಉಚ್ಚ ನ್ಯಾಯಾಲಯವನ್ನು ಕೇಳಿ ಕೊಳ್ಳಲಾಗುವುದು.

ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗಿರುವ ಅರಣ್ಯ ಭೂಮಿ.

2864:(3887)

ಶ್ರೀ ಕೆ.ಎನ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಮುಳುಗಡೆ ಆಗಲಿರುವ ಹಾಗೂ ಕಾಲುವೆಗೆ ಬೇಕಾದ ಅರಣ್ಯ ಜಮೀನು ಎಷ್ಟು?

ಆ) ಇದಕ್ಕೆ ಪರಿಹಾರವಾಗಿ ನೀರಾವರಿ ಇಲಾಖೆಯಿಂದ ಹಣ ತುಂಬಿದ್ದು ಯಾವಾಗ, ಬದಲಿ ಭೂಮಿಯನ್ನು ಯಾವಾಗ ನೀಡಲಾಗಿದೆ? (ಸ್ಥಳದ ವಿವರ ನೀಡುವುದು)

ಇ) ಇದುವರೆಗೆ ಅರಣ್ಯ ಭೂಮಿ ಹಸ್ತಾಂತರವಾಗದ ಕೆಲಸಕ್ಕೆ ತೊಂದರೆ ಆಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಹಸ್ತಾಂತರ ವಿಷಯ ಈಗ ಯಾವ ಹಂತದಲ್ಲಿದೆ?

ಉ) ಇದನ್ನು ಯಾವಾಗ ಹಸ್ತಾಂತರ ಮಾಡಲಾಗುವುದು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗುವ ಅರಣ್ಯ ಜಮೀನಿನ ವಿವರ.

1) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗಲಿರುವುದು	-	427.29 ಹೆಕ್ಟೇರ್
2) ಕಾಲುವೆಗಾಗಿ	-	22.26 ಹೆಕ್ಟೇರ್
ಒಟ್ಟು	-	449.55 ಹೆಕ್ಟೇರ್

ಅ) ದಿ: 7-9-94ರಲ್ಲಿ ರೂ. 1.75 ಲಕ್ಷ ಹಾಗೂ 23-10-96 ರಲ್ಲಿ ರೂ. 148.25 ಲಕ್ಷ ಒಟ್ಟು ರೂ. 150 ಲಕ್ಷಗಳನ್ನು ನೀರಾವರಿ ಇಲಾಖೆಯವರು ಪಾವತಿಸಿರುತ್ತಾರೆ. ಪರಿಹಾರಾತ್ಮಕ ನೆಡುತೋಪು ಬೆಳೆಸಲು ಈ ಕೆಳಕಂಡ ಯೋಗ್ಯವಾದ ಪ್ರದೇಶವನ್ನು ಗುರುತಿಸಲಾಗಿದ್ದು, ಆ ಪ್ರದೇಶಗಳು ಅರಣ್ಯ ಇಲಾಖೆಗೆ ಇನ್ನೂ ಖಾತೆ ಬದಲಾವಣೆಯಾಗಲು ಬಾಕಿ ಇರುತ್ತದೆ.

ಭದ್ರಾವತಿ ವಿಭಾಗ:

	ಗ್ರಾಮ	ಸರ್ವೆ ನಂ.
1)	ಮಾದರನಾಯಕನಹಳ್ಳಿ	17
2)	ಶೃಂಗಾರಬಾದ್	16
3)	ಬೆಂಕಿಕೆರೆ	50
4)	ಮಸಲಿಕೆರೆ	83:4
5)	ಮಾವಿನಹೊಳೆ	14
6)	ಗಂಗಕೊಂಡನಹಳ್ಳಿ	36:34
7)	ಚೀರನಹಳ್ಳಿ	50
8)	ಉದೇವ	29

ಚಿಕ್ಕಮಗಳೂರು ವಿಭಾಗ	**ಸರ್ವೆ ನಂ.**
1) ಕಣಿವೆದಾಸರಹಳ್ಳಿ	84
2) ಐ.ಡಿ.ಪೀಠ	290, 291, 292 ಮತ್ತು 294
3) ಗುತ್ತಿ	22, 294
4) ಹಾಡಿ ಓಣಿ	21, 23, 56

ಶಿವಮೊಗ್ಗ ವಿಭಾಗ

1)	ದಾಸರಹಟ್ಟಿ	25, 35
2)	ದಾಸರಹಟ್ಟಿ	37

ಬ) ಬಂದಿದೆ

ಈ) ತುಂಗಾ ಮೇಲ್ಪಂಡೆ ಯೋಜನೆಗೆ ಬೇಕಾಗುವ 449.55 ಹೆಕ್ಟೇರ್ ಅರಣ್ಯ ಪ್ರದೇಶ ಬಿಡುಗಡೆ ಮಾಡುವ ಬಗ್ಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ರೀತ್ಯಾ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ದಿ: 16-12-96 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತದೆ. ಕೇಂದ್ರ ಸರ್ಕಾರವು ತನ್ನ ದಿನಾಂಕ 25-4-97ರ ಪತ್ರದಲ್ಲಿ ಕೇಳಿರುವ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸಲಾಗಿತ್ತು. ಪುನಃ ಕೇಂದ್ರ ಸರ್ಕಾರವು ದಿ:5-5-98ರ ಪತ್ರದಲ್ಲಿ ಕೆಲವೊಂದು ಹೆಚ್ಚಿನ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಹೆಚ್ಚಿನ ಮಾಹಿತಿಯನ್ನು ಕ್ರೋಢೀಕರಿಸಲಾಗುತ್ತಿದೆ ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಉ) ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಪ್ರಕಾರ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಅರಣ್ಯ ಭೂಮಿ ಬಿಡುಗಡೆ ಮಾಡಲು ಆಸ್ಪದವಿಲ್ಲ. ಕೇಂದ್ರ ಸರ್ಕಾರ ಕೋರಿರುವ ಹೆಚ್ಚುವರಿ ಮಾಹಿತಿಗಳನ್ನು ಕಳುಹಿಸಿ ಆ ನಂತರ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಂಡು ಹಸ್ತಾಂತರಿಸಲಾಗವುದು.

ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ

2865:(3888)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಅರಣ್ಯ ಪ್ರದೇಶವನ್ನು ಕಾಯಲು ಎಷ್ಟು ಗಾರ್ಡ್‌ಗಳ ಅವಶ್ಯಕತೆ ಇದೆ? (ಜಿಲ್ಲಾವರು ವಿವರ ನೀಡುವುದು)

ಇ) ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ಗಾರ್ಡ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಈ) ಇನ್ನು ಅವಶ್ಯಕವಿರುವ ಗಾರ್ಡ್‌ಗಳ ಹುದ್ದೆಗಳನ್ನು ಎಷ್ಟು ಅವಧಿಯೊಳಗೆ ಭರ್ತಿ ಮಾಡಲಾಗುವುದು?